Online Newspaper Clipping Service

**Dated, Saturday, 1st April – 2017**

DECCAN HERALD

**Pg.No.09**

# SC puts on hold 25-yr age bar for NEET candidates

NEW DELHI: The Supreme Court on Friday put on hold a regulation restricting the age of candidates to 25 years for taking the National Eligibility-cum-Entrance Test for admission to MBBS and BDS courses.

All candidates, irrespective of their age, can now fill up the forms online for the all-India medical entrance exams till April 5.

A batch of petitions was filed by medical aspirants, who submitted that the age limit was prescribed by the Medical Council of India (MCI) without there being a regulation to impose a condition like this.

The petitioners also complained that the MCI had exceeded its authority by stipulating an age bar through a mere notice, instead of a formal regulation.

Though the MCI asserted its authority, the bench held a prima facie view that the age limit cannot be prescribed by the regulator without a formal exercise of issuing pertinent regulations.

In this situation, the bench of Justices Dipak Misra and A M Khanwilkar said, it was imperative to extend the deadline to April 5 for candidates above 25 who would now want to fill up the NEET application forms.

Earlier, the last date for acceptance of forms was March 1. The examinations will be held on May 7. The court directed district authorities to extend all support to the Central Board of Secondary Education so that the forms are accepted and the examinations are held on the date fixed.

The court restrained all high courts from entertaining any litigation related to allocation of exam centres, observing that this might delay the entire process. The next hearing in the case will be in July.

# MBBS course barely covers autism, docs fail to detect it

## Pediatricians, General Practitioners Need Adequate Training, Say Experts

Sunitha.Rao@timesgroup.com

**Bengaluru:** Om was born in October 2009 without any complications. However, two years later, the boy's parents and playschool teachers noticed that he preferred to play alone, was not focusing and didn't like to be part of the rhymes circle.

The child's speech wasn't developing and he wouldn't cry. Doctors, however, said the child was fine and would catch up soon. In fact, his pediatrician was a senior doctor from a superspecialty hospital in the city. Eight months later, as suggested by a special educator, the boy's parents took him

**WORLD AUTISM DAY**

to a psychiatrist. That is when little Om was diagnosed with Autism Spectrum Disorder (ASD), a complex developmental disability. The signs typically appear during early childhood and affect a person's ability to communicate and interact with others.

Om, now seven, is among many children who are diagnosed with autism after much delay. This is primarily due to lack of orientation and training among MBBS students about the developmental disorder. While autism finds only a passing mention in MBBS course, it's only an introduction in MD pediatrics.

"If all the pediatricians we visited were more aware and alert, we could have diagnosed his problem 8 months earlier and could have immediately put him on therapy. Earlier the therapy begins, greater the chances of improvement," said Geetha V M, Om's mother.

"Brain development is maximum in the first three years of life, and that's when the therapies have an impact on a child with autism. Early intervention through communication and speech therapy could even help a child overcome autism," says pediatrician and autism specialist Dr Shilpa Rao. Dr Rao is herself a mother of a 17-year-old boy who has almost recovered from autism. If a child doesn't pick up speech, fails to socialize, and doesn't imitate or is lacking in efforts to communicate, then parents must inform the pediatrician about the child's behaviour.

Dr Karunakara B P, former president of Indian Academy of Pediatrics, Karnataka chapter, says the need of the hour is to train pediatricians and general practitioners on telltale signs of autism. "Unless we diagnose early, a child with autism doesn't get better," he says.




### CHECK FOR MENTAL MILESTONES

According to Dr Nandini Mundkur, autism specialist and director of Centre for Child Development and Disabilities, cases of autism are only increasing. "I get to see 3-4 new cases a day. Though no survey has been done, we can say that one in every 125 children suffers from autism. Not tracking mental milestones is a major lacuna. Pediatricians should not just ask about a child's sitting, standing and walking activities, but also check if the kid smiles, likes to mingle and expresses emotions," she says.

"Saying rhymes, numbers and alphabets isn't speech. A child has to express his/her emotions through language. Parents' doubts must be addressed by pediatricians who also need to educate themselves," adds Dr Nandidi.

### ಶೈಕ್ಷಣಿಕ ಮತ್ತು ಮೂಲಸೌಕರ್ಯಗಳ ಗುಣಮಟ್ಟ ಮೌಲ್ಯಮಾಪನ

# ಖಾಸಗಿ ವಿಶ್ವವಿದ್ಯಾಲಯಗಳೇ ಮೊದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಮತ್ತು ಮೂಲಸೌಕರ್ಯಗಳ ಗುಣಮಟ್ಟವನ್ನು ಮೌಲ್ಯಮಾಪನ ಮಾಡಿ ಅಂಕ ನೀಡಲಾಗಿದೆ. ಖಾಸಗಿ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳಿಗೆ ಹೋಲಿಸಿದರೆ ಸಾಮಾನ್ಯ ವಿಶ್ವವಿದ್ಯಾಲಯಗಳು ಈ ಕ್ಷೇತ್ರಗಳಲ್ಲಿ ಹಿಂದೆ ಬಿದ್ದಿವೆ.

ದೇಶದಲ್ಲಿರುವ ಎಲ್ಲ ವಿಶ್ವವಿದ್ಯಾಲಯಗಳ ಗುಣಮಟ್ಟ ಅಳೆದು ಅಂಕ ನೀಡುವ ತೀರ್ಮಾನವನ್ನು ಕೇಂದ್ರ ಸರ್ಕಾರ ಕೈಗೊಂಡಿತ್ತು. ಅದರಂತೆ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು 'ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಶ್ರೇಯಾಂಕ ಚೌಕಟ್ಟು' (ಕೆಎಸ್‌ಯುಆರ್‌ಎಫ್) ಸಿದ್ಧಪಡಿಸಿದೆ.

ವಿಶ್ವವಿದ್ಯಾಲಯಗಳಿಗೆ ನೀಡಲಾದ ಅಂಕಗಳ ಪಟ್ಟಿಯನ್ನು ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರಡ್ಡಿ ಶುಕ್ರವಾರ ಬಿಡುಗಡೆ ಮಾಡಿದರು.

ರಾಜ್ಯದಲ್ಲಿ ಸರ್ಕಾರಿ, ಡೀಮ್ಡ್, ಖಾಸಗಿ ಸೇರಿ 52 ವಿಶ್ವವಿದ್ಯಾಲಗಳಿವೆ. ಅದರಲ್ಲಿ 40 ವಿಶ್ವವಿದ್ಯಾಲಯಗಳಲ್ಲಿ ಸಮೀಕ್ಷೆ ನಡೆಸಲಾಗಿದೆ. 38 ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದಂತೆ ಅಂಕಪಟ್ಟಿ ಪ್ರಕಟಿಸಿದ್ದು, ಕರ್ನಾಟಕ ಮತ್ತು ಕುವೆಂಪು ವಿಶ್ವವಿದ್ಯಾಲಗಳ ವರದಿ ಇನ್ನಷ್ಟೇ ಸಿದ್ಧವಾಗಬೇಕಿದೆ. 'ಐ ಕೇರ್ ರೇಟಿಂಗ್' ಎಂಬ ಖಾಸಗಿ ಸಂಸ್ಥೆ ಸಮೀಕ್ಷೆ ನಡೆಸಿದೆ.

ವಿಶ್ವವಿದ್ಯಾಲಯಗಳಲ್ಲಿ ನಡೆಯುವ ಸಂಶೋಧನೆ, ಹೊಸ ಆವಿಷ್ಕಾರಗಳು, ಬೋಧನಾ ಗುಣಮಟ್ಟ ಮತ್ತು ಸಿಬ್ಬಂದಿ ಸಂಖ್ಯೆ, ಮೂಲಸೌಕರ್ಯ ಮತ್ತು ಸಾರ್ವಜನಿಕರ ಪಾಲ್ಗೊಳ್ಳುವಿಕೆ ಎಂಬ ವಿಷಯಗಳ ಕುರಿತು ಸಮೀಕ್ಷೆ ನಡೆಸಲಾಗಿದೆ. ಗರಿಷ್ಠ 5 ಸ್ಟಾರ್ ಮತ್ತು 1,000 ಅಂಕದ ಮಿತಿಯೊಳಗೆ ಆಯಾ ವಿಶ್ವವಿದ್ಯಾಲಯ ಎಷ್ಟು ಸ್ಟಾರ್ ಮತ್ತು ಅಂಕ ಗಳಿಸಿದೆ ಎಂಬುದನ್ನು ವಿವರಿಸಲಾಗಿದೆ.

> ವಿಶ್ವವಿದ್ಯಾಲಯಗಳಿಗೆ ಅಂಕ ನೀಡಿದ ಮೊದಲ ರಾಜ್ಯ ಕರ್ನಾಟಕ. ಇದರಿಂದ ಯಾವ ವಿಶ್ವವಿದ್ಯಾಲಯಕ್ಕೆ ಏನು ಅಗತ್ಯವಿದೆ ಎಂದು ಗೊತ್ತಾಗುತ್ತದೆ
>
> **ಬಸವರಾಜ ರಾಯರಡ್ಡಿ**
> ಉನ್ನತ ಶಿಕ್ಷಣ ಸಚಿವ

**ಖಾಸಗಿ ವಿ.ವಿಗಳೇ ಮೊದಲು:** 10 ವರ್ಷಕ್ಕಿಂತ ಹಿಂದೆ ಆರಂಭವಾದ ಎಂಟು ವಿಶ್ವವಿದ್ಯಾಲಯಗಳಿದ್ದು, ಮಣಿಪಾಲ್ ವಿ.ವಿ 737 ಅಂಕ ಪಡೆಯುವ ಮೂಲಕ ಮೊದಲ ಸ್ಥಾನದಲ್ಲಿದೆ. ಎರಡನೇ ಸ್ಥಾನದಲ್ಲಿ ಗುಲ್ಬರ್ಗ ವಿವಿ (557) ಮತ್ತು ಕೊನೆಯ ಸ್ಥಾನದಲ್ಲಿ ಮಂಗಳೂರು ವಿವಿ (428) ಇದೆ.

ಐದರಿಂದ ಹತ್ತು ವರ್ಷದೊಳಗೆ ಸ್ಥಾಪನೆಯಾದ ವಿ.ವಿಗಳ ಪಟ್ಟಿಯಲ್ಲಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿಶ್ವವಿದ್ಯಾಲಯ (711) ಮೊದಲ ಸ್ಥಾನದಲ್ಲಿದೆ. ಎರಡನೇ ಸ್ಥಾನದಲ್ಲಿ ಜೈನ್ ವಿಶ್ವವಿದ್ಯಾಲಯ (661) ಇದ್ದರೆ, ದಾವಣಗೆರೆ ವಿ.ವಿ ಕೊನೆಯ ಸ್ಥಾನ (279) ಪಡೆದಿದೆ. 5 ವರ್ಷದೊಳಗಿನ ವಿ.ವಿಗಳ ಪಟ್ಟಿಯಲ್ಲಿ ಪಿಇಎಸ್ ವಿಶ್ವವಿದ್ಯಾಲಯ ಪ್ರಥಮ (617) ಮತ್ತು ರೈ ಟೆಕ್ನಾಲಜಿ ವಿ.ವಿ ಕೊನೆಯ (305) ಸ್ಥಾನದಲ್ಲಿದೆ.

ವಿಷಯಾಧಾರಿತ ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಧಾರವಾಡದ ಕೃಷಿ ವಿ.ವಿ ಪ್ರಥಮ (779), ಬೀದರ್‌ನ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ದ್ವಿತೀಯ (656) ಹಾಗೂ ಜಾನಪದ ವಿಶ್ವವಿದ್ಯಾಲಯ ಕೊನೆ (289) ಸ್ಥಾನದಲ್ಲಿದೆ.

**ವಿಷಯಾಧಾರಿತ ವಿ.ವಿಗಳಿಗೆ ಹಿನ್ನಡೆ:** ಸರ್ಕಾರ ಈಚೆಗೆ ವಿಷಯಾಧಾರಿತ ವಿಶ್ವವಿದ್ಯಾಲಯಗಳನ್ನು ಹೆಚ್ಚಿಗೆ ಆರಂಭಿಸಿದೆ. ಆದರಲ್ಲಿ ಅನೇಕ ವಿಶ್ವವಿದ್ಯಾಲಯಗಳಲ್ಲಿ ಗುಣಮಟ್ಟದ ಬೋಧನೆ, ಮೂಲ ಸೌಕರ್ಯ, ಸಂಶೋಧನೆ ಮತ್ತು ಆವಿಷ್ಕಾರ ನಡೆಯದಿರುವುದು ಸಮೀಕ್ಷೆಯ ಮೂಲಕ ಕಂಡುಬಂದಿದೆ.

ಸಂಶೋಧನೆ ಮತ್ತು ಆವಿಷ್ಕಾರದಲ್ಲಿ ಕನ್ನಡ ವಿಶ್ವವಿದ್ಯಾಲಯ, ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯ ಮತ್ತು ಸಂಸ್ಕೃತ ವಿಶ್ವವಿದ್ಯಾಲಯಗಳು ಶೂನ್ಯ ಸಾಧನೆ ಮಾಡಿವೆ. ಮೂಲ ಸೌಕರ್ಯದಲ್ಲೂ ಸಂಸ್ಕೃತ ಮತ್ತು ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯಗಳು '0' ಸ್ಟಾರ್ ಪಡೆದಿವೆ. ಜಾನಪದ ವಿಶ್ವವಿದ್ಯಾಲಯದಕ್ಕೆ ಬೋಧನೆ ಗುಣಮಟ್ಟ ಮತ್ತು ಆವಿಷ್ಕಾರಕ್ಕೆ ಕೇವಲ 1 ಸ್ಟಾರ್ ಬಂದಿದೆ.

## ಯಾವ ವಿಶ್ವವಿದ್ಯಾಲಯಕ್ಕೆ ಎಷ್ಟು ಅಂಕ

### 10 ವರ್ಷಕ್ಕಿಂತ ಹಿಂದೆ ಆರಂಭವಾದ ವಿಶ್ವವಿದ್ಯಾಲಯಗಳು

| ವಿಶ್ವವಿದ್ಯಾಲಯ | ಸ್ಟಾರ್ (5ಕ್ಕೆ) | ಅಂಕ (1,000ಕ್ಕೆ) |
|---|---|---|
| ಮಣಿಪಾಲ್ ವಿ.ವಿ | 4 | 737 |
| ಗುಲ್ಬರ್ಗ ವಿ.ವಿ | 3 | 557 |
| ಕೆ.ಎಲ್‌ಇ ವಿ.ವಿ | 3 | 535 |
| ಮೈಸೂರು ವಿ.ವಿ | 3 | 518 |
| ಬೆಂಗಳೂರು ವಿ.ವಿ | 3 | 493 |
| ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ | 3 | 488 |
| ತುಮಕೂರು ವಿ.ವಿ | 3 | 446 |
| ಮಂಗಳೂರು ವಿ.ವಿ | 3 | 428 |

### 5ರಿಂದ 10 ವರ್ಷದೊಳಗಿನ ವಿವಿಗಳು

| ವಿಶ್ವವಿದ್ಯಾಲಯ | ಸ್ಟಾರ್ (5ಕ್ಕೆ) | ಅಂಕ (1,000ಕ್ಕೆ) |
|---|---|---|
| ಜಗದ್ಗುರು ಶಿವರಾತ್ರೀಶ್ವರ ವಿ.ವಿ | 4 | 711 |
| ಜೈನ್ ವಿ.ವಿ | 4 | 661 |
| ಯೆನೆಪೋಯ ವಿ.ವಿ | 3 | 585 |
| ನಿಟ್ಟೆ ವಿ.ವಿ | 3 | 554 |
| ಕ್ರೈಸ್ಟ್ ವಿ.ವಿ | 3 | 547 |
| ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ | 3 | 472 |
| ಬಿಎಲ್‌ಡಿಇ ವಿ.ವಿ | 3 | 464 |
| ವಿಜಯನಗರ ಶ್ರೀಕೃಷ್ಣದೇವರಾಯ ವಿ.ವಿ | 3 | 462 |
| ಸಿದ್ಧಾರ್ಥ ವಿ.ವಿ | 2 | 374 |
| ರಾಣಿ ಚೆನ್ನಮ್ಮ ವಿ.ವಿ | 2 | 280 |
| ದಾವಣಗೆರೆ ವಿ.ವಿ | 2 | 279 |

### 5 ವರ್ಷದೊಳಗಿನ ವಿಶ್ವವಿದ್ಯಾಲಯಗಳು

| ವಿಶ್ವವಿದ್ಯಾಲಯ | ಸ್ಟಾರ್ (5ಕ್ಕೆ) | ಅಂಕ (1,000ಕ್ಕೆ) |
|---|---|---|
| ಪಿಇಎಸ್ ವಿ.ವಿ | 4 | 617 |
| ಎಂ.ಎಸ್ ರಾಮಯ್ಯ ವಿ.ವಿ | 4 | 603 |
| ರೇವಾ ವಿ.ವಿ | 3 | 574 |
| ದಯಾನಂದ ಸಾಗರ್ ವಿ.ವಿ | 3 | 464 |
| ಕೆಎಲ್‌ಇ ತಾಂತ್ರಿಕ ವಿ.ವಿ | 3 | 437 |
| ಪ್ರೆಸಿಡೆನ್ಸಿ ವಿ.ವಿ | 2 | 322 |
| ರೈ ಟೆಕ್ನಾಲಜಿ ವಿ.ವಿ | 2 | 305 |

### ವಿಷಯಾಧಾರಿತ ವಿಶ್ವವಿದ್ಯಾಲಯಗಳು

| ವಿಶ್ವವಿದ್ಯಾಲಯ | ಸ್ಟಾರ್ (5ಕ್ಕೆ) | ಅಂಕ (1,000ಕ್ಕೆ) |
|---|---|---|
| ಧಾರವಾಡ ಕೃಷಿ ವಿ.ವಿ | 4 | 779 |
| ಕರ್ನಾಟಕ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿ.ವಿ | 4 | 656 |
| ಬೆಂಗಳೂರು ಕೃಷಿ ವಿ.ವಿ | 4 | 634 |
| ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ | 3 | 580 |
| ರಾಜ್ಯ ಕಾನೂನು ವಿ.ವಿ | 3 | 473 |
| ರಾಜ್ಯ ಮಹಿಳಾ ವಿ.ವಿ | 3 | 460 |
| ಬಾಗಲಕೋಟೆ ತೋಟಗಾರಿಕಾ ವಿ.ವಿ | 3 | 445 |
| ಕನ್ನಡ ವಿಶ್ವವಿದ್ಯಾಲಯ | 3 | 440 |
| ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿ.ವಿ | 2 | 338 |
| ಕರ್ನಾಟಕ ಸಂಸ್ಕೃತ ವಿ.ವಿ | 2 | 321 |
| ಕರ್ನಾಟಕ ರಾಜ್ಯ ಮುಕ್ತ ವಿ.ವಿ | 2 | 301 |
| ಕರ್ನಾಟಕ ಜಾನಪದ ವಿ.ವಿ | 2 | 289 |

ಕೋಲಾರ ಪತ್ರಿಕೆ



# ಚದುಮನಹಳ್ಳಿಯಲ್ಲಿ ಎನ್ನೆಸ್ಸೆಸ್ ಶಿಬಿರ



ಕೋಲಾರ ಮಾ ೩೧

ದೇವರಾಜ್ ಅರಸು ವೈದ್ಯಕೀಯ ಕಾಲೇಜು, ದೇವರಾಜ್ ಅರಸ್ ವೈದ್ಯಕೀಯ ಬೋಧನಾ ವಿಶ್ವವಿದ್ಯಾಲಯದಿಂದ ತಾಲೂಕಿನ ಚದುಮನಹಳ್ಳಿಯಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರದ ಮುಕ್ತಾಯ ಸಮಾರಂಭ ನಡೆಯಿತು.

೭ ದಿನಗಳ ಶಿಬಿರದಲ್ಲಿ ಊರಿನಲ್ಲಿ ಸ್ವಚ್ಛ ಮಾಡುವ ಮೂಲಕ ಶ್ರಮದಾನ ಮಾಡಲಾಯಿತು. ಶಾಲಾ ಮಕ್ಕಳಿಂದ ಸಾಂಸ್ಕೃತಿಕ, ಸಾಹಿತ್ಯ ಸ್ಪರ್ಧೆಗಳು, ಕಥಾ ನಿರೂಪಣೆ, ನೃತ್ಯ, ಕ್ರೀಡೆಗಳು ಜರುಗಿದವು.

ವಿವಿಧ ಆಟ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಮುಕ್ತಾಯ ಸಮಾರಂಭದಂದು ಯುಗಾದಿ ಹಬ್ಬವಾದ ಕಾರಣ ಊರಿನ ಮುಖಂಡರು, ವೈದ್ಯರು, ವಿದ್ಯಾರ್ಥಿಗಳು ಎಲ್ಲ ಬೇವು ಬೆಲ್ಲ ಹಂಚಿದರು.

ಜಿಲ್ಲಾ ಕಸಾಪ ಅಧ್ಯಕ್ಷ ನಾಗನಂದ ಕೆಂಪರಾಜ್, ಗ್ರಾಮ ಪಂಚಾಯಿತಿ ಸದಸ್ಯ ವೆಂಕಟೇಶ್, ಆರ್.ಎಲ್. ಜಾಲಪ್ಪ ಆಸ್ಪತ್ರೆಯ ಯೋಜನಾ ತಜ್ಞ ಡಾ॥ ಜಗದೀಶ್, ರಾಜ್ಯ ಮಾನವ ಹಕ್ಕುಗಳ ಜನಪರ ಸಂಘದ ಯುವ ರಾಜ್ಯ ಸಂಚಾಲಕ ಟಿಮಕ ಡಾ॥ ಎನ್. ಸುರೇಶ್‌ಕುಮಾರ್ ಮೊದಲಾದವರು ಉಪಸ್ಥಿತರಿದ್ದರು.